ಕಾರಕೂನರಿಗೆ ನಮ್ಮ ಕ್ಷೇತ್ರಗಳಲ್ಲೇ 150-200 ರೂ ಕೊಡುತ್ತಿದ್ದೇವೆ. ಅವರು ಹೇಗೆ ಜೀವನ ಮಾಡುವುದು? ನಿಮ್ಮ ಕಾರ್ಮಿಕ ಇಲಾಖೆ ಬಹಳ ಚೆನ್ನಾಗಿ ಕೆಲಸ ಮಾಡಬೇಕಾಗುತ್ತದೆ. ಇದು ನಿದ್ದೆ ಮಾಡಿಕೊಂಡು ಕೂತರೆ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಸ್ಪೆಸಿಫಿಕ್ಕಾಗಿ ನಮಗೆ ಉತ್ತರ ಕೊಡಬೇಕು. ಆದಷ್ಟು ಬೇಗ ಎಂದರೆ ಒಂದು ವಾರವೇ, ದಿವಸವೇ 6 ತಿಂಗಳೇ? ಈ 23 ಇಂಡಸ್ಟ್ರೀಗಳು ಬಹಳ ಮುಖ್ಯವಾಗಿರುವಂಥವು. ಈಗ ಏನಾಗುತ್ತದೆಂದರೆ ವೆಸ್ಟೆಡ್ ಇಂಟೆರೆಸ್ಟ್ ಇವೆ, ಬೇಕೆಂದೇ ಇವು ಕೆಲಸ ಮಾಡುವುದಕ್ಕೆ ಬಿಡುವುದಿಲ್ಲ. ನಾನು ಪ್ರಶ್ನೋತ್ತರ ಸಮಯ ಆಗಿರುವುದರಿಂದ ವಿವರಗಳಿಗೆ ಹೋಗುತ್ತಾ ಇಲ್ಲ. ದಯವಿಟ್ಟು ನೀವು ಎಷ್ಟು ತಿಂಗಳು ಒಳಗಡೆ ಕೊನೆಯ ಪಕ್ಷ 10ಕ್ಕೂ 15ಕ್ಕೋ ಮಾಡುತ್ತೇವೆಂದು ದಯವಿಟ್ಟು ಸ್ಪೆಸಿಫಿಕ್ಕಾಗಿ ಹೇಳಿ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ : ಅಧ್ಯಕ್ಷರೇ, ಸದಸ್ಯರು ಖಚಿತವಾಗಿ 10 ಇಂಡಸ್ಟ್ರೀಗಳಿಗೆ ಯಾವ ಸಮಯದಲ್ಲಿ ಮಾಡುತ್ತೀರಿ ಎಂದು ಕೇಳಿದ್ದಾರೆ. ಈಗ ತಾನೇ ಅದನ್ನು ಪ್ರೊಸೆಸ್ನಲ್ಲಿ ಹಾಕಿದ್ದೇವೆ. ಕನಿಷ್ಠ 6 ತಿಂಗಳೊಳಗೆ ಅದನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಬೀರನಹಳ್ಳಿ ಬಡಾವಣೆಯಲ್ಲಿ ಬಿಡಿ ನಿವೇಶನಗಳ ಹರಾಜು

3 - ಶ್ರೀ ಬಿ. ಶಿವರಾಮ್ (ಗಂಡಸಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನದ ಗೃಹ ನಿರ್ಮಾಣ ಮಂಡಳಿಯ ಬೀರನಹಳ್ಳಿ ಹೊಸ ಬಡಾವಣೆಯಲ್ಲಿ ಬಿಡಿ ನಿವೇಶನಗಳ ಹರಾಜಿನಿಂದ ಇಲ್ಲಿಯವರೆಗೆ ಮಂಡಳಿಗೆ ಬಂದಿರುವ ಹಣವೆಷ್ಟು ಹಾಗೂ ಆ ಹಣವನ್ನು ಯಾವ ಯಾವ ಬಾಬಿಗೆ ಉಪಯೋಗಿಸಲಾಗಿದೆ.

ಆ) ಹೊಸ ಬಡಾವಣೆಯ ಮೊದಲನೆಯ ಹಂತ ಮತ್ತು ಎರಡನೆಯ ಹಂತ ಯಾವಾಗ ಪ್ರಾರಂಭಿಸಲಾಯಿತು ಹಾಗೂ ಅಲ್ಲಿನ ರಸ್ತೆ, ನೀರು ಮತ್ತು ಒಳ ಚರಂಡಿಯ ವ್ಯವಸ್ಥೆ ಹೇಗಿರುವುದು?

ಇ) ಈ ಕೆಲಸಗಳ ಪ್ರಗತಿ ಯಾವ ಹಂತದಲ್ಲಿದೆ ಮತ್ತು ಕೆಲಸಕ್ಕೆ ಸರ್ಕಾರ ಹಣ ಬಿಡುಗಡೆ ಮಾಡಲಾಗಿದೆಯೇ?

ಈ) 1-1-93ರಿಂದ ಇಲ್ಲಿಯವರೆವಿಗೆ ಆದಕ್ಕಾಗಿ ಬಿಡುಗಡೆಯಾಗಿರುವ ಹಣವೆಷ್ಟು?

ಶ್ರೀ ಗೋಪಿನಾಥ ಆರ್. ಸಾಂದ್ರ (ವಸತಿ ಸಚಿವರು) :

ಅ) 1) ಇದುವರೆಗೂ ಒಟ್ಟು ರೂ. 58,81,723-00

2) ಈ ಹಣವನ್ನು ಮನೆ ಹೊರಗಿನ ಸೌಲಭ್ಯಗಳಿಗೆ ಮತ್ತು ಮನೆಗಳ ಅಂತಿಮ ಬೆಲೆಯನ್ನು ಕಡಿಮೆಗೊಳಿಸಲು ಹೊಂದಾಣಿಕೆ ಮಾಡಿಕೊಳ್ಳಲಾಗಿದೆ.

ಆ) ಮೊದಲನೆಯ ಹಂತ 1975-76ರಲ್ಲಿ ಪ್ರಾರಂಭವಾಗಿ 1983-84ರಲ್ಲಿ ಪೂರ್ಣಗೊಂಡಿತು. ನೀರು ಮತ್ತು ಒಳಚರಂಡಿ ವ್ಯವಸ್ಥೆ ಸಮರ್ಪಕವಾಗಿರುತ್ತದೆ. ರಸ್ತೆ ಕಾಮಗಾರಿಗಳು ಪೂರ್ಣಗೊಳ್ಳಬೇಕಾಗಿರುತ್ತದೆ. ಎರಡನೇ ಹಂತ 1990-91ರಲ್ಲಿ ಪ್ರಾರಂಭವಾಗಿದ್ದು, ಮನೆಗಳು ವಿವಿಧ ಹಂತದಲ್ಲಿರುತ್ತದೆ. ನೀರು ಒಳಚರಂಡಿ ಇತ್ಯಾದಿ ಕಾರ್ಯಗಳನ್ನು ಪ್ರಾರಂಭಿಸಬೇಕಾಗಿರುತ್ತದೆ.

ಇ) ಒಂದನೇ ಹಂತದಲ್ಲಿ ಮನೆ ಕೆಲಸಗಳು ಮುಗಿದಿದ್ದು, ಹೊರ ಅಭಿವೃದ್ಧಿ ಕೆಲಸಗಳು ಮುಗಿದಿದ್ದು, ರಸ್ತೆ ಕೆಲಸಗಳು ಬಾಕಿ ಇರುತ್ತದೆ. ಯೋಜನೆ ಪೂರ್ತಿಗೊಳ್ಳಲು ಕಾರಣಾಂತರಗಳಿಂದ ಅಂದಾಜಿಗಿಂತ ಹೆಚ್ಚಾಗಿದ್ದು ರಸ್ತೆ ಕೆಲಸಗಳು ನಿಧಾನವಾಗಿದೆ.

ಎರಡನೇ ಹಂತದ ಮನೆಗಳು ವಿವಿಧ ಸ್ಥಾಯಿಯಲ್ಲಿರುತ್ತದೆ. ನೀರು, ವಿದ್ಯುತ್, ಒಳಚರಂಡಿ ಕೆಲಸಗಳನ್ನು ಮಾಡಬೇಕಾಗಿರುತ್ತದೆ. ಹುಡ್ಕೋ ಸಾಲದ ನೆರವಿನಿಂದ ಈ ಕೆಲಸ ಕೈಗೊಳ್ಳಲಾಗಿದೆ.

ಈ) 28.00 ಲಕ್ಷ ರೂ.ಗಳು

ಶ್ರೀ ಬಿ. ಶಿವರಾಮು : ಅಧ್ಯಕ್ಷರೇ, ನಿವೇಶನಗಳನ್ನು ಹರಾಜು ಮಾಡಿದ್ದರಿಂದಲೇ 58 ಲಕ್ಷ ರೂ ಬಂದಿದೆ ಎಂದು ಹೇಳಿದ್ದಾರೆ. ಅದನ್ನು ಯಾವ್ಯಾವ ಬಾಬ್ತಿಗೆ ಖರ್ಚು ಮಾಡಿದ್ದೀರಿ ಅಂತ ಕೇಳಿದ್ದೇನೆ. ನೀವು ಸುಲಭವಾಗಿ ಉತ್ತರ ಕೊಟ್ಟಿದ್ದೀರಿ. ಹೊರಗಿನ ಸೌಲಭ್ಯಗಳಿಗೆ ಎಂದು. ಅದಕ್ಕಾಗಿಯೇ ನೀವು ಯಾವುದಕ್ಕೆ ಖರ್ಚು ಮಾಡಿದ್ದೀರಿ ಎಂಬುದನ್ನು ನೀವು ಹೇಳಬೇಕು. ಎರಡನೆಯದು 75-76ರಲ್ಲಿ ಮೊದಲನೇ ಹಂತ ಪ್ರಾರಂಭ ಮಾಡಿ 83-84ಕ್ಕೆ ಮುಗಿಸಿದ್ದೀರಿ ಎಂದು ಹೇಳಿದ್ದೀರಿ. ಮನೇನೂ ಕೊಟ್ಟಿದ್ದೀರಿ. ಅಲ್ಲಿದ್ದ ನಿವೇಶನಗಳನ್ನೂ ಹರಾಜು ಮಾಡಿಕೊಂಡಿದ್ದೀರಿ. ರಸ್ತೆ ಇನ್ನೂ ಪೂರ್ಣಮಾಡಿಲ್ಲ ಎಂದು ಹೇಳಿದ್ದೀರಿ, ಜನ ಹೇಗೆ ವಾಸ ಮಾಡೋದು ಎಂಬುದರ ಬಗ್ಗೆ ನೀವು ಚಿಂತನೆ ಮಾಡಿದ್ದೀರಾ? ಮಲೆನಾಡು ಅದು. ಮೂರನೆಯದು ಆ ಕೆಲಸಕ್ಕೆ 1-1-93ರಿಂದ ಇಲ್ಲಿಯವರೆಗೆ ಬಿಡುಗಡೆಯಾಗಿರುವ ಹಣವೆಷ್ಟು ಎಂದು ಕೇಳಿದ್ದೇನೆ. ಎರಡನೇ ಹಂತ ನೀವು 91-92ರಲ್ಲಿ ಪ್ರಾರಂಭ ಮಾಡಿದ್ದೀರಿ. ಅದು ಕುಂಟುತ್ತಲೇ ಇದೆ. ಅದು ಇರಲಿ. ಇನ್ನೂ 28 ಲಕ್ಷ ಎಂದು ಹೇಳಿದ್ದೀರಿ. ನಾನು ಪ್ರಮುಖವಾಗಿ ಯಾಕೆ ಈ ಪ್ರಶ್ನೆ ಕೇಳಿದೆ ಎಂದರೆ ಹಿಂದೆ ನಡೆದ ಸದನದಲ್ಲಿ ಒಂದು ಪ್ರಶ್ನೆಗೆ ತಾವು 26 ಲಕ್ಷ ರೂ ಎರಡನೇ ಹಂತಕ್ಕೆ ಬಿಡುಗಡೆಯಾಗಬೇಕು ಅಂತ ಉತ್ತರ ಹೇಳಿದ್ದೀರಿ. ಪಶುಸಂಗೋಪನಾ ಸಚಿವರು ತಮ್ಮ ಪರವಾಗಿ ಉತ್ತರ ಕೊಡುವಾಗ ಏನು ಹೇಳಿದ್ದರೆಂದರೆ 2ತಿಂಗಳಲ್ಲಿ ಹಣವನ್ನು ಗುತ್ತಿಗೆದಾರರಿಗೆ ಬಿಡುಗಡೆ ಮಾಡಿಸುತ್ತೇನೆಂದು ಹೇಳಿ ಆ ಫೈಲ್ ಮೇಲೆ ಬರೆದಿದ್ದರು. ಅದಾದನಂತರ ಭರವಸೆ ಸಮಿತಿಯಲ್ಲೂ ಆ ಫೈಲನ್ನು ತರಿಸಿ ಕೊಂಡರು. ಆದ್ದರಿಂದ ನಾನು ಕೇಳುವುದಿಷ್ಟೆ ನಿಮ್ಮ ಭರವಸೆಗೆ ಏನಾದರೂ ಮಹತ್ವ ಇದೆಯೇ? ಇನ್ನೂ ಎಷ್ಟು ಹಣ ಬಿಡುಗಡೆ ಮಾಡಬೇಕು? ಇಷ್ಟಕ್ಕೆ ಉತ್ತರ ಹೇಳಿ.

ಶ್ರೀ ಗೋಪಿನಾಥ್ ಆರ್. ಸಾಂಡ್ರ : ಈ ಸಮಸ್ಯೆಯ ಮಾಹಿತಿ ತೆಗೆದುಕೊಂಡಾಗ ಇದು ಬಹಳ ಜಟಿಲವಾದದ್ದು. ಅಲ್ಲಿ ಯಾವ ಕೆಲಸಕ್ಕೆ ಎಷ್ಟು ಹಣ ಖರ್ಚು ಮಾಡಬೇಕಾಗಿತ್ತೋ ಅದರ ಎರಡು ಪಟ್ಟು ಹಣ ಖರ್ಚಾಗಿ 75-76ರಲ್ಲಿ ಆದ ಕಾರ್ಯಕ್ರಮ ಅದು. ಅಂದು ಮಾಡಿದಂಥಾದ್ದು ಈಗ 77 ಲಕ್ಷ ರೂ. ಅಡಿಷನಲ್ ಆಗಿ ಖರ್ಚಾಗಿದೆ. ಮತ್ತು ಅಲ್ಲಿ ನಡೆದಿರುವ ವ್ಯವಹಾರಗಳು ಅಷ್ಟು ಸರಿಯಾಗಿ ಕಾಣಿಸುತ್ತಿಲ್ಲ. ಆದ್ದರಿಂದ ನಾನು ಇದನ್ನು ಖುದ್ದು ಅಲ್ಲಿನ ಶಾಸಕರೊಡನೆ ಮತ್ತು ಅಲ್ಲಿನ ಅಧ್ಯಕ್ಷರೊಡನೆ ಪರಿಶೀಲನೆ ಮಾಡಿ ಏನೇನು ಮಾಡಬೇಕೆಂಬ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುತ್ತೇವೆ ಮತ್ತು ಅವರು ಖರ್ಚು ಮಾಡಿದ್ದು ಎಷ್ಟು ಯಾರ್ಯಾರಿಗೆ ಕೊಟ್ಟಿದ್ದಾರೆ ಎಂಬ ಬಗ್ಗೆ ವಿವರಗಳನ್ನು ನಾನು ಕೊಡುತ್ತಿದ್ದೇನೆ. ಮೊದಲು ಹರಾಜಿನ ಹಣ ಎಷ್ಟು ಬಂತು ಎಂದರೆ ರೂ 58.81723, ಈ ಯೋಜನೆ ನಿರ್ಮಾಣ 75-76ರಲ್ಲಿ ಆಗಿದೆ. ಇದು ನಿಗೂಢವಾದದ್ದು ಇದೆ. ದೊಡ್ಡದೊಂದು ಕೆರೆಯಲ್ಲಿ ಈ ಬಡಾವಣೆಯನ್ನು ಮಾಡಿಕೊಂಡಿದ್ದಾರೆ. ಅದಕ್ಕೆ 13 ಕೆರೆಗಳಿಂದ ನೀರು ಬರುತ್ತದೆ. ಆ ನೀರು ಬರುವುದು ಆ ಯೋಜನೆ ಮಾಡಿದವರ ಕಲ್ಪನೆಗೆ ಇತ್ತೋ ಇಲ್ಲವೋ ಗೊತ್ತಿಲ್ಲ. ಆದರೂ ಅದನ್ನು ಮಾಡಿದ್ದಾರೆ. ಅದಕ್ಕಾಗಿ ಇವರು ಹೆಚ್ಚಿನ ಹಣವನ್ನು ಖರ್ಚು ಮಾಡಿದ್ದಾರೆ ಎಂದು ನನಗೆ ಮಾಹಿತಿ ಬಂದಿದೆ. 1.31 ಲಕ್ಷ ರೂ. ಗಳನ್ನು ಕೆಳಗಿನ ಚನ್ನಪಟ್ಟಣ ಕೆರೆಯನೋಡಿಯನ್ನು ಹೆಚ್ಚು ಆಗಲ ಮಾಡುವುದಕ್ಕಾಗಿ ಖರ್ಚು

ಮಾಡಲಾಗಿದೆ. ಬೀರನಹಳ್ಳಿ ಕೆರೆ ಒಡೆದು ನೀರನ್ನು ಹೊರಗೆ ತೆಗೆಯುವ ಕೆಲಸಕ್ಕೆ ತಗಲುಚಿದ ವೆಚ್ಚ 1.32 ಲಕ್ಷ ರೂ. ಹಾಸನ ಮಂಗಳೂರು ರೈಲ್ವೆ ದಾರಿಯಲ್ಲಿ ಸೇತುವೆ ನಿರ್ಮಾಣ ಮಾಡಿದ್ದಕ್ಕೆ 5.21 ಲಕ್ಷ ರೂ. ಹಾಸನ ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಸೇತುವೆ ಅಗಲ ಮಾಡಲು ತಗುಲಿದ ಖರ್ಚು 5.31 ಲಕ್ಷವಾಗಿದೆ. ಹಾಸನ ಮತ್ತು ಜೀವನಹಳ್ಳಿ ಸೇತುವೆಯನ್ನು ಪುನರ್ನಿರ್ಮಾಣ ಮಾಡುವುದಕ್ಕಾಗಿ 1.25 ಲಕ್ಷ ರೂ. ಹೀಗೆ 14,11,985 ರೂ.ಗಳನ್ನು ಖರ್ಚು ಮಾಡಲಾಗಿದೆ. ಇದನ್ನು ಗುರುತರವಾದ ಜವಾಬ್ದಾರಿ ಹೊತ್ತುಕೊಂಡು ಆದಷ್ಟು ಬೇಗನೆ ನಾನು ಅಧ್ಯಕ್ಷರನ್ನು ಕರೆದುಕೊಂಡು ಗಂಡಸಿ ಕ್ಷೇತ್ರಕ್ಕೆ ಹೋಗಿ ಅಲ್ಲೇನಾಗಿದೆ ಎಂದು ತಿಳಿದುಕೊಂಡು ಅದಕ್ಕೆ ಯೋಗ್ಯ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಇನ್ನು ಆಶ್ವಾಸನೆ ಕೊಟ್ಟಿರುವ ಬಗ್ಗೆ 77 ಲಕ್ಷ ರೂ. ಈಗಾಗಲೇ ಹೆಚ್ಚಿಗೆ ಖರ್ಚು ಮಾಡಿದ್ದೇವೆ. ಇದು ಬಜೆಟ್ ಎಸ್ಟಿಮೇಟ್ನಲ್ಲಿರಲಿಲ್ಲ. ಇನ್ನೂ ಅನೇಕ ಲೋಪದೋಷಗಳು ಕಂಡುಬರುತ್ತವೆ. ಮತ್ತೆ ಹಣ ಖರ್ಚು ಮಾಡಿದರೆ ಅದೂ ಏನಾದರೂ ಆಗಬಹುದೆಂಬ ಭೀತಿಯಿಂದ ಆದನ್ನು ನಾವು ಸ್ವಲ್ಪ ತಡೆಹಿಡಿದ್ದೇವೆ. ನಾವೂ ನೀವೂ ಎಲ್ಲಾ ಸೇರಿ ಈ ಸಮಸ್ಯೆಯನ್ನು ಬಗೆಹರಿಸೋಣ.

ಶ್ರೀ ಕೆ.ಎಚ್. ಹನುಮೇಗೌಡ : ಅಧ್ಯಕ್ಷರೇ, ಇದು ಹಾಸನ ಕ್ಷೇತ್ರದ ಪ್ರಶ್ನೆ. ನಾನು ಅಲ್ಲಿನ ಪ್ರತಿನಿಧಿ. ಅಲ್ಲಿ ಆಗಿರುವ ಅನಾನುಕೂಲಗಳೇನು ಎಂಬುದನ್ನು ನಾನು ಹೇಳಬೇಕು. ಇಲ್ಲದಿದ್ದರೆ ಅಧಿಕಾರಿಗಳ ಗಮನಕ್ಕೆ ಬರುವುದು ಹೇಗೆ?

ಅಧ್ಯಕ್ಷರು : ಹಾಗಾದರೆ ನೀವು ಬೇರೆ ಪ್ರಶ್ನೆ ಕೇಳಿ. ಈಗ ಕುಳಿತುಕೊಳ್ಳಿ.

ಶ್ರೀ ಕೆ.ಎಚ್. ಹನುಮೇಗೌಡ : ನೀವು ಅವಕಾಶ ಕೊಡಬೇಕು. ತಾವು ಏಕೆ ಹೀಗೆ ಮಾಡ್ತೀರಿ? ನಾನು ಆ ಕ್ಷೇತ್ರದ ಪ್ರತಿನಿಧಿ. ನಾನು ಕೈ ತೋರಿಸಿದರೂ ಅದನ್ನು ನೋಡದೆ ನೀವು ಬೇರೆ ಕಡೆ ನೋಡಿ ಹೇಳಿಬಿಟ್ಟರೆ ಹೇಗೆ? ಬೇರೆಯವರಿಗೆಲ್ಲಾ ಅವಕಾಶ ಕೊಡ್ತೀರಿ?

ಅಧ್ಯಕ್ಷರು : ಇಲ್ಲ ಅವಕಾಶ ಕೊಡುವುದಿಲ್ಲ, ಕುಳಿತುಕೊಳ್ಳಿ.

ಶ್ರೀ ಕೆ.ಎಚ್. ಹನುಮೇಗೌಡ : ಯಾಕೆ ಸ್ವಾಮಿ? ನಾನು ಅಲ್ಲಿನ ಪ್ರತಿನಿಧಿ. ಅಲ್ಲಿ ಮನುಷ್ಯರು ತಿರುಗಾಡೋಕೆ ಆಗುವುದಿಲ್ಲ. ಅಲ್ಲಿ ಲಕ್ಷಾಂತರ ರೂ. ಖರ್ಚು ಮಾಡಿ ಎಲ್ಲಾ ನುಣ್ಣಗೆ ತಿಂದುಹಾಕಿದ್ದಾರೆ. ನಿಮಗೆ ಬೇಕಾದ ಪ್ರಶ್ನೆಗಳಿಗೆಲ್ಲಾ ಹತ್ತಾರು ಸಲ ಅವಕಾಶ ಕೊಡ್ತೀರಿ. ನಾನು ಆ ಕ್ಷೇತ್ರದ ಶಾಸಕ ಬೇರೆ ಕ್ಷೇತ್ರಗಳ ಶಾಸಕರು ಪ್ರಶ್ನೆ ಕೇಳುತ್ತೇವೆ ಅಂತಾರೆ. ಇದಕ್ಕೆ ಖಂಡಿತ ನೀವು ಅವಕಾಶ ಕೊಡಬೇಕು. ಆ ಜನಗಳಿಗಾಗಿರುವ ತೊಂದರೆಯನ್ನು ನಾನು ಸರ್ಕಾರದ ಗಮನಕ್ಕೆ ತರಬೇಕಾಗಿದೆ.

ಅಧ್ಯಕ್ಷರು : ತಾವು ಕುಳಿತುಕೊಳ್ಳಿ.

ಶ್ರೀ ಕೆ.ಹೆಚ್. ಹನುಮೇಗೌಡ : ಏತಕ್ಕೆ ಹೇಳಿ? ಬೇರೆಯವರಿಗೆಲ್ಲಾ 15-20 ಸಾರಿ ಅವಕಾಶ ಕೊಟ್ಟು ನನಗೆ ಏತಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳುತ್ತೀರಿ? ನಾನು ಆ ಕ್ಷೇತ್ರದ ಶಾಸಕ. ಅಲ್ಲಿ ಅನುನುಕೂಲವಾಗಿದೆ. ಅಲ್ಲಿ ಲಕ್ಷಾಂತರ ರೂಪಾಯಿಗಳಷ್ಟು ಹಣ ಮೋಸವಾಗಿದೆ. ಮಳೆಗಾಲದಲ್ಲಿ ಸಸಿಗಳನ್ನು ನೆಡಬಹುದು. ರೋಡುಗಳಲ್ಲಿ ಇಂಥ ಅನಾನುಕೂಲವಾಗಿದೆ. ಬಂದು ಹೋದವರೆಲ್ಲಾ ಬಯ್ಯುತ್ತಾರೆ, ಶಾಪ ಹಾಕುತ್ತಾರೆ. ಇಂಥ ಪ್ರಶ್ನೆ ಕೇಳುತ್ತೇನೆ ಎಂದರೆ ತಾವು ಕೂಡಿ ಎಂದು ಹೇಳುತ್ತೀರಿ, ಏನು ಇದರ ಅರ್ಥ?

ಅಧ್ಯಕ್ಷರು : ತಮ್ಮ ಕ್ಷೇತ್ರದ ಬಗ್ಗೆ ಬೇರೆ ಪ್ರಶ್ನೆಗಳನ್ನು ಹಾಕಬೇಕಾಗಿತ್ತು.

ಶ್ರೀ ಕೆ.ಹೆಚ್. ಹನುಮೇಗೌಡ : ಇದಕ್ಕೆ ನೀವು ಅವಕಾಶವನ್ನು ಕೊಡಲೇಬೇಕು.

ಅಧ್ಯಕ್ಷರು : ತಾವು ಕುಳಿತುಕೊಳ್ಳಿ ಹೇಳುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ : ನಾನು ಏತಕ್ಕೆ ಕುಳಿತುಕೊಳ್ಳಬೇಕು? ನಾನು ಕುಳಿತುಕೊಳ್ಳುತ್ತೇನೆ, ನಿಮ್ಮ ಆರ್ಡರನ್ನು ಒಬೇ ಮಾಡುತ್ತೇನೆ. ಆದರೆ ಇದು ಬಹಳ ಪ್ರಾಮುಖ್ಯವಾದುದು.

ಅಧ್ಯಕ್ಷರು : ತಾವು ಕುಳಿತುಕೊಳ್ಳಿ. ಹೇಳುತ್ತೇನೆ.

ಶ್ರೀ ಬಿ. ಶಿವರಾಮು : ಇದು ಗಂಡಸಿ ಕ್ಷೇತ್ರಕ್ಕೆ ಸೀಮಿತವಾದಂಥ ಪ್ರಶ್ನೆಯಲ್ಲ. ಇದು ಹಾಸನ ಟೌನ್ನ ಹೌಸಿಂಗ್ ಬೋರ್ಡ್ ಬಗ್ಗೆ ಕೇಳುತ್ತಿದ್ದೇವೆ. ಗಂಡಸಿಯಲ್ಲಿ ತಾವು ಯಾವುದನ್ನೂ ಪ್ರಾರಂಭ ಮಾಡಿಲ್ಲ. ನಾನು ಅಲ್ಲೇ ಇದ್ದು ಸಿಟಿಯಲ್ಲಿ ಇರತಕ್ಕಂಥ ಸಮಸ್ಯೆಯನ್ನು ತಮ್ಮ ಗಮನಕ್ಕೆ ತಂದದ್ದು. ಈ 58 ಲಕ್ಷ ರೂಪಾಯಿಗಳನ್ನು ತಾವು ನಮ್ಮಲ್ಲಿ ಇರತಕ್ಕಂಥ ನಿವೇಶನ ಹರಾಜಿನಲ್ಲಿ ರಿಯಲೈಸ್ ಮಾಡಿಕೊಂಡಿರತಕ್ಕಂಥ ಹಣ. 14 ಲಕ್ಷ ರೂಪಾಯಿ ಮಾತ್ರ ತಾವು ಖರ್ಚು ಮಾಡಿದ್ದೇವೆ ಎಂದು ಹೇಳಿದ್ದಕ್ಕೆ ನಾನು ಈ ಪ್ರಶ್ನೆಯನ್ನು ತಮಗೆ ಕೇಳಿರುವುದು. ನಮ್ಮಿಂದ ತೆಗೆದುಕೊಳ್ಳತಕ್ಕಂಥ ಹಣದಲ್ಲೇ ತಾವು ಅಭಿವೃದ್ಧಿಪಡಿಸುವುದಕ್ಕೆ ರಸ್ತೆ, ಒಳಚರಂಡಿ ಮಾಡದೆ ಸೊಳ್ಳೆ ಕಾಟದಲ್ಲಿ ಜನರು ಏನು ಅವಸ್ಥೆ ಪಡುತ್ತಿದ್ದಾರೆ. ತಾವು ಬಂದು ನೋಡಿದರೆ ಗೊತ್ತಾಗುತ್ತದೆ. ಹಿಂದೆ ಬಂದವರು ಅದನ್ನು ನೋಡಿ ಪರಿಶೀಲನೆ ಮಾಡುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದರು. ಕಾಗೋಡು ತಿಮ್ಮಪ್ಪನವರು ಅಧ್ಯಕ್ಷರಾಗಿ ಬಂದಾಗ ಪೂರ್ಣ ನೋಡಿಕೊಂಡು ಬಂದರು. ಆವತ್ತು ಅಲ್ಲೇ ಹೇಳಿಬಿಟ್ಟರು. ಇಲ್ಲಿ ಇರುವ ನಿವೇಶನವನ್ನೆಲ್ಲಾ ಹರಾಜು ಮಾಡಿ ಇಂಪ್ರೂವ್ ಮಾಡಿ ಎಂದು. 40 ಲಕ್ಷ ರೂಪಾಯಿ ಹರಾಜಿನಿಂದ ಬಂದಂಥ ಹಣ ಅದೇ 40 ಲಕ್ಷ ರೂಪಾಯಿಗಳನ್ನು ಇವರು ಖರ್ಚು ಮಾಡಿದ್ದಾರೆ. ಹಿಂದೆ ಹರಾಜು ಮಾಡಿದಂಥ ಕೆಲಸ ಇದು. ಈಗ ರಿಯಲೈಸ್ ಆಯಿತಲ್ಲಾ 92-93ರಲ್ಲಿ ತಿಮ್ಮಪ್ಪನವರು ಅಧ್ಯಕ್ಷರಾಗಿ ಸ್ಥಳ ಪರೀಕ್ಷೆ ಮಾಡಿದಂಥ ನಂತರ ನಿವೇಶನಗಳು ಹರಾಜಾಗಿ ಬಂದಂಥ 40 ಲಕ್ಷ ರೂಪಾಯಿ ಹಣ ಏನಾಯಿತು? ಎಲ್ಲಿಗೆ ಹೋಯಿತು? ಏತಕ್ಕೆ ರಸ್ತೆಯಾಗಲಿಲ್ಲ. ಒಳಚರಂಡಿಗಳಾಗಿಲ್ಲ.

ಜನಗಳ ಪರಿಸ್ಥಿತಿ ಬಗ್ಗೆ ಅವರೇ ಹೇಳುತ್ತಾರೆ. ಸ್ಥಳ ಸರಿ ಇಲ್ಲ. ನಾವು ಸೆಲೆಕ್ಟ್ ಮಾಡಿರತಕ್ಕಂಥದ್ದು ಸರಿಯಲ್ಲ ಎಂದು ಹೇಳಿದ್ದಾರೆ. ನಿಜ. ಅಂಥ ಒಂದು ಸರಿಯಾದ ರೀತಿ ಮಾಡಿ ಬಂದಂಥ ಹಣ ಕೂಡ ಸದುಪಯೋಗ ಮಾಡದೇ 14 ಲಕ್ಷಕ್ಕೆ ಬಡ್ಡಿ ಕೊಡುತ್ತಾರೆ. 40 ಲಕ್ಷ ರೂಪಾಯಿ ಏನಾಯಿತು? ಎರಡನೇ ಹಂತಕ್ಕೆ ತಾವು ಗುತ್ತಿಗೆದಾರರಿಗೆ ಬಾಕಿ ಇರತಕ್ಕಂಥ ಹಣವನ್ನು ಈ ಸದನದಲ್ಲಿ ಭರವಸೆಯನ್ನು ಕೊಟ್ಟು ಭರವಸೆ ಕಮಿಟಿಯಲ್ಲೂ ಕೂಡ ತಾವು ಹಣ ಇನ್ನೂ ಬಿಡುಗಡೆಯಾದರೆ ಅದು ಹಾಗೆಯೇ ಅರ್ಧದಲ್ಲಿ ನಿಂತಿದೆಯೆಲ್ಲ ಕೆಲಸ ಅದಕ್ಕೆ ಕಾರಣವೇನು? ತಾವು ಹೇಳುತ್ತೀರಿ, ನಾವು ಕೊಟ್ಟಿದ್ದೆವು ಸದನದಲ್ಲಿ ಆಶ್ವಾಸನೆ ಎಂದು ಹೇಳಿ. ಅದಕ್ಕೇನೂ ಮಹತ್ವವಿಲ್ಲವೇ? ತಾವು ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ಎನ್ನುವುದನ್ನು ಹೇಳಿ. ಈಗ ಬಾಕಿ ಕೆಲಸವನ್ನು ನಿಲ್ಲಿಸಿದ್ದಾರೆ. ಕೆಲಸವನ್ನು ನಿಲ್ಲಿಸಿ ಆ ಗುತ್ತಿಗೆದಾರರಿಗೆ ಇನ್ನೂ ಹಣ ಕೊಡುವಂಥ ಕೆಲಸ ಮಾಡಿಲ್ಲ. ಇದು ಎರಡನೆಯ ಸಾರಿ ಚರ್ಚೆ ಮಾಡುತ್ತಿರತಕ್ಕಂಥದ್ದು. ಮಾನ್ಯ ಹನುಮೇಗೌಡರು ಹೇಳುವುದರಲ್ಲಿ ಅರ್ಥವಿದೆ. ಅಲ್ಲಿ ಕೆಲಸಗಳು ಏನೂ ನಡೆಯದಿದ್ದರೂ ಅಷ್ಟು ಅವ್ಯವಸ್ಥೆ ಇದ್ದರೂ ಜವಾಬ್ದಾರಿಯಾಗಿ ಹಿಂದಿನ ಅಧ್ಯಕ್ಷರು ಸ್ಥಳ ಪರಿಶೀಲನೆ ಮಾಡಿ ಬಂದು ಇರತಕ್ಕಂಥ ಜಾಗವನ್ನು ಹರಾಜು ಮಾಡಿರತಕ್ಕಂಥ ಹಣದ ಬಗ್ಗೆ ಪ್ರಗತಿಯನ್ನು ಸರಿಯಾಗಿ ಕೊಡದೆ ಇವತ್ತು ನಾವು ಮಾಡಿದ್ದೇವೆ ಎಂದು ಹೇಳಿದರೆ 92-93ರಲ್ಲಿ

ಬಾಕಿ ಇರತಕ್ಕಂಥ ಗುತ್ತಿಗೆದಾರರಿಗೆ ಹಣವನ್ನು ಮತ್ತೆ ಎಷ್ಟು ದಿವಸದಲ್ಲಿ ತಾವು ಕೊಡುತ್ತೀರಿ ಎನ್ನತಕ್ಕಂಥದ್ದನ್ನು ತಾವು ಹೇಳಬೇಕು. ಮೊದಲು ಕೊಟ್ಟಂಥ ಭರವಸೆಯಂತೆ ಭರವಸೆಯಾಗಬಾರದು. ಅದನ್ನು ಈಡೇರಿಸುತ್ತೇವೆ ಎನ್ನತಕ್ಕಂಥ ಶಕ್ತಿ ಇದ್ದರೆ ತಾವು ಆಶ್ವಾಸನೆ ಕೊಡಿ. ಸುಮ್ಮನೆ ಆಶ್ವಾಸನೆಯನ್ನು ಕೊಡುವಂಥದ್ದನ್ನು ಸದನದಲ್ಲಿ ಮಾಡಿ ಇದರ ಮಹತ್ವವನ್ನು ಹಾಳು ಮಾಡತಕ್ಕಂಥ ಕೆಲಸವನ್ನು ದಯಮಾಡಿ ಮಾಡಬೇಡಿ.

ಶ್ರೀ ಗೋಪಿನಾಥ್ ಆರ್. ಸಾಂಡ್ರಾ : ನಾನು ಈಗಾಗಲೇ ಹೇಳಿದ್ದೇನೆ. 77 ಲಕ್ಷ ರೂಪಾಯಿಗಳು ನಮ್ಮ ಎಸ್ಟಿಮೇಟ್ಗಿಂತ ಹೆಚ್ಚಿಗೆ ಖರ್ಚಾಗಿದೆ. ವಿವರ ಕೊಡಿ ಎಂದಿದ್ದಕ್ಕೆ 14 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಉಳಿದ ಪ್ಲಾನ್ ಎಸ್ಟಿಮೇಟ್ ಪ್ರಕಾರ ಡಬಲ್ ಖರ್ಚಾಗಿದೆ. ಅದರ ಬಗ್ಗೆ ವಿಚಾರಣೆಯಾಗಬೇಕಾಗಿದೆ. ಏತಕ್ಕೆ ಖರ್ಚಾಯಿತು? ಏನಾಯಿತು ಎನ್ನುವ ಬಗ್ಗೆ ವಿಚಾರ ಮಾಡಬೇಕು. ಯಾವುದೇ ಹಣವನ್ನು ನಾವು ಬಾಕಿ ಉಳಿಸಿಕೊಳ್ಳುವುದಿಲ್ಲ. ಕಂಟ್ರಾಕ್ಟರ್ ಸರಿಯಾಗಿ ಕೆಲಸ ಮಾಡಿದ್ದರೆ ಅವರಿಗೆ ಕಂಟ್ರಾಕ್ಟ್ ಹಣವನ್ನು ಕೊಡುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ : ಸನ್ಮಾನ್ಯ ಅಧ್ಯಕ್ಷರೇ, ಬೀರನಹಳ್ಳಿ ಬಡಾವಣೆ ಹೌಸಿಂಗ್ ಬೋರ್ಡ್ನಲ್ಲಿ ಮಾಡಿರತಥ ಕಾಲೋನಿಯ ರೋಡುಗಳಲ್ಲಿ ಮಳೆಗಾಲದಲ್ಲಿ ಭತ್ತದ ಸಸಿಗಳನ್ನು ನೆಡಬಹುದು. ಒಂದು ಅಡಿಯಿಂದ ಎರಡು ಅಡಿ, ಎರಡೂವರೆ ಅಡಿ ಕೆಸರು ಇರುತ್ತದೆ. ಅದು ಎಕ್ಸಾಜರೇಷನ್ ಅಲ್ಲ. ಬೇಕಾದರೆ ರಿಪೋರ್ಟ್ ತರಿಸಿ ನೋಡಿಕೊಳ್ಳಿ. ಇದನ್ನು ನಾಲ್ಕಾರು ಸಾರಿ ಅಸೆಂಬ್ಲಿಯಲ್ಲೂ ಪ್ರಸ್ತಾಪ ಮಾಡಿದೆವು. ಮೊದಲು ಪ್ರಸ್ತಾಪ ಮಾಡಿದ್ದೆ ನಾನು. ಸಂಬಂಧಪಟ್ಟ ಅಧಿಕಾರಿಗಳನ್ನು ಹೋಗಿ ಕಂಡೆ. ಎಲ್ಲರಿಗೂ ಹೇಳಿ ಆಯಿತು. ಸರಿ ಮಾಡುತ್ತೇವೆ ಎಂದು ಹೇಳುತ್ತಾರೆ. ಅಲ್ಲಿ ಅಧಿಕಾರಿಗಳಿಗೆ ಮುಖ್ಯವಾಗಿ ಇಂಜಿನಿಯರುಗಳಿಗೆ ದುಡ್ಡುಬೇಕಾದಾಗ ರಸ್ತೆ ಕೆಟ್ಟಿದೆ ಎಂದು ಹೇಳುತ್ತಾರೆ, ಮಣ್ಣು ತರುತ್ತಾರೆ, ಹಾಕುತ್ತಾರೆ ದುಡ್ಡು ಹೊಡೆಯುತ್ತಾರೆ, ಹಂಚಿಕೊಳ್ಳುತ್ತಾರೆ. ಎಲ್ಲಿಯವರೆಗೆ ಇದನ್ನು ಸಹಿಸಿಕೊಂಡು ಹೋಗುವುದು? ಆ ಜನ ಮಾಡಿರುವ ಪಾಪವಾದರೂ ಏನು? ಆ ಜನ ಆ ಮನೆಯಲ್ಲಿ ಇರುವುದಕ್ಕೆ ಹೌಸಿಂಗ್ ಬೋರ್ಡ್ನವರಿಗೆ ದುಡ್ಡು ಕೊಟ್ಟಿಲ್ಲವೇ? ಸಿವಿಕ್ ಅಮೆನಿಟೀಸ್ ಏರ್ಪಾಡು ಮಾಡಿಕೊಡುತ್ತೇವೆ ಎಂದು ಹೇಳಿ ವ್ಯವಸ್ಥೆ ಮಾಡಿ ಅವರನ್ನು ಮನೆಯ ಒಳಗಡೆ ಸೇರಿಸಿಬಿಟ್ಟು ಹೆಂಗಸರು ಮಕ್ಕಳುಗಳ ಎದುರುಗಡೆ ತಿರುಗುವ ಹಾಗೆ ಇಲ್ಲ. ಇಡೀ ಶಾಪವನ್ನು ಹಾಕುತ್ತಾರೆ. ಸರ್ಕಾರದ ಮೇಲೆ ಹಾಕುತ್ತಾರೆ. ಎಲ್ಲರ ಮೇಲೂ ಹಾಕುತ್ತಾರೆ. ಶಾಸಕರ ಮೇಲೆ ಹಾಕುತ್ತಾರೆ. ಮಂತ್ರಿಗಳ ಮಾತು ಬಿಡಿ. ಅನ್ನಬಾರದನ್ನೆಲ್ಲಾ ಅನ್ನುತ್ತಾರೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಇಲ್ಲಿ ಕುಳಿತಿದ್ದಾರೆ. ಇವರೂ ಸಹ ಅಲ್ಲಿಗೆ [illegible] ಭೇಟಿ ಕೊಟ್ಟರು.

ಅಧ್ಯಕ್ಷರು : ಹನುಮೇಗೌಡರೇ, ತಾವು ಉಪ ಪ್ರಶ್ನೆ ಕೇಳಿ.

ಶ್ರೀ ಕೆ.ಹೆಚ್. ಹನುಮೇಗೌಡ : ಮಾನ್ಯ ಕಾಗೋಡು ತಿಮ್ಮಪ್ಪನವರು ಹೌಸಿಂಗ್ ಬೋರ್ಡಿನ ಛೇರ್ಮನ್ ಆಗಿದ್ದರು. ಇವರು ಬಂದು ಭೇಟಿ ಕೊಟ್ಟರು. ಇಲ್ಲಿ ರೋಡ್ ಬಹಳ ಕೆಟ್ಟು ಹೋಗಿದೆ. ದುಡ್ಡು ಇಲ್ಲ. ಈ ಸೈಟುಳನ್ನು ಹರಾಜು ಮಾಡುತ್ತೇವೆ. ಹರಾಜು ಮಾಡಿ ಬಂದ ದುಡ್ಡಿನಲ್ಲಿ ರೋಡನ್ನು ಮಾಡುತ್ತೇವೆ ಎಂದು ಭರವಸೆ ಕೊಟ್ಟು ಬಂದರು. ಈಗ ಮೇಜು ಕುಟ್ಟುವ ಅವಶ್ಯಕತೆ ಇಲ್ಲ. ಹಾಗೆಂದು ಹೇಳಿ ಬಂದ ಮೇಲೆ ಅಲ್ಲಿ ಹರಾಜು ಹಾಕಿದರು. 55 ಲಕ್ಷ ರೂಪಾಯಿ ದುಡ್ಡು ಬರುತ್ತದೆ ಎಂದು ಹೇಳಿದರು. 78 ಲಕ್ಷ ರೂಪಾಯಿ ಏನೋ ಬಂದಿದೆ ಎಂದು ಲೆಕ್ಕ ಕೊಡುತ್ತಾರೆ. ಇಷ್ಟು ದುಡ್ಡು ಬಂದಾದ ಮೇಲೆ ರೋಡ್ ಮಾಡುವುದು ಬೇಡವೇ? ಜೆಲ್ಲಿ ಹಾಕಬೇಡವೇ? ಟಾರ್ ಮಾಡಬೇಡವೇ ಇದು ಅಧಿಕಾರದಲ್ಲಿ

ಇದ್ದವರ ಜವಾಬ್ದಾರಿ ಅಧಿಕಾರ ಹೋದಾಗ ಜನ ಒಳ್ಳೆಯ ಕೆಲಸ ಮಾಡಿದರೆ ನೆನದು ಕೊಳ್ಳುತ್ತಾರೆ. ಅದೇ ಮಾಡಬಾರದ ಕೆಲಸ ಮಾಡಿದರೆ.....

ಅಧ್ಯಕ್ಷರು : ತಾವು ಉಪ ಪ್ರಶ್ನೆ ಏನು ಕೇಳುತ್ತೀರಿ?

ಶ್ರೀ ಕೆ.ಹೆಚ್. ಹನುಮೇಗೌಡ : ಅಲ್ಲಿ ಬಂದು ನೋಡಿದರೆ ಗೊತ್ತಾಗುತ್ತದೆ. ಈಗ ಮಾನ್ಯ ಸಚಿವರು ಇದ್ದಾರೆ. ಅವರಿಗೂ ನನಗೂ ಸಂಬಂಧ ಇಲ್ಲ. ಅವರು ಏನೂ ಹೇಳಬೇಕಾಗಿಲ್ಲ. ಅಧಿಕಾರ ಇರುವುದರಿಂದ ಕೇಳುತ್ತೇನೆ. ರೋಡ್ ಮಾಡಿಕೊಡುತ್ತೇವೆಂದು ಹೇಳಿ ಹರಾಜು ಹಾಕಿದ್ದಾರೆ. 55 ಲಕ್ಷ ರೂಪಾಯಿ ದುಡ್ಡು ಬಂತು. ರೋಡನ್ನು ಏಕೆ ಮಾಡಲಿಲ್ಲ? ಏತಕ್ಕೆ ಹಣ ಖರ್ಚು ಆಯಿತು. ಈ ಅಕ್ರಮದ ಬಗ್ಗೆ ತನಿಖೆ ಮಾಡುತ್ತೀರಾ, ಟಾರ್, ಸಿಮೆಂಟ್ ಜಲ್ಲಿ ಯಾವಾಗ ಹಾಕುತ್ತಾರೆ ಎಂಬುದನ್ನು ದಯಮಾಡಿ ತಿಳಿಸಿ.

ಶ್ರೀ ಗೋಪಿನಾಥ್ ಆರ್. ಸಾಂಡ್ರಾ : ಶ್ರೀಮಾನ್ ಹನುಮೇಗೌಡರು ಏನು ಅಲ್ಲಿಯ ಪರಿಸ್ಥಿತಿಯನ್ನು ಹೇಳಿದರು, ಅದು ನಿಜ. ಅಲ್ಲಿ ರೋಡ್ ಮಾಡಿದ್ದರೂ ಅದು ಮತ್ತೆ ಕೆಳಗೆ ಹೋಗಿ ಬಿಟ್ಟಿದೆ. ಕೆರೆ ಇದ್ದುದರಿಂದ ಅಲ್ಲಿ ಸರಿಯಾದ ಫೌಂಡೇಷನ್ ಹಾಕದೇ ಇರುವುದರಿಂದ ಅವರು ಹೇಳಿದ ಹಾಗೆ ಒಳಗೆ ಹೋಗಿದೆ. ಹುಲ್ಲೂ ಸಹ ಬೆಳೆದಿದೆ. ಇದನ್ನೆಲ್ಲಾ ವಿಚಾರಣೆ ಮಾಡಬೇಕು ಎಂದು ಹೇಳಿ ಮೊದಲನೆಯದಾಗಿ ನಾನು ಪ್ರತ್ಯಕ್ಷವಾಗಿ ಕಂಡು ಅನಂತರ ತನಿಖೆ ಮಾಡುವಂತಹ ವ್ಯವಸ್ಥೆಯನ್ನು ಮಾಡುತ್ತೇನೆ.

ಮನೆಗಳ ನಿರ್ಮಾಣ ಕುರಿತು

634 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಳಬಾಗಿಲು ಟೌನ್ನಲ್ಲಿ ಕರ್ನಾಟಕ ಹೌಸಿಂಗ್ ಬೋರ್ಡಿನವರು ಕಟ್ಟಬೇಕೆಂದಿರುವ ಮನೆಗಳಿಗೆ ಸಾರ್ವಜನಿಕರಿಂದ ಬಂದ ಅರ್ಜಿಗಳೆಷ್ಟು? (ಹೈಯರ್ ಇನ್ಕಂ, ಮಿಡ್ಲ್ ಇನ್ಕಂ ಮತ್ತು ಲೋಯರ್ ಇನ್ಕಂ ವಿವರಗಳನ್ನು ತಿಳಿಸುವುದು)

ಆ) ಈ ಬಗ್ಗೆ ಒಟ್ಟು ಎಷ್ಟು ಎಕರೆ ಜಮೀನು ವಶಪಡಿಸಿಕೊಳ್ಳಲು ಸರ್ಕಾರದವರು ನಿರ್ಣಯಿಸಿದ್ದಾರೆ?

ಇ) ಜಮೀನು ವಶಪಡಿಸಿಕೊಳ್ಳಲು ನಿಧಾನವಾಗುತ್ತಿರುವುದಕ್ಕೆ ಕಾರಣವೇನು?

ಶ್ರೀ ಗೋಪಿನಾಥ ಆರ್. ಸಾಂಡ್ರಾ (ವಸತಿ ಸಚಿವರು) :

ಅ) ಒಟ್ಟು 97 ಅರ್ಜಿಗಳು. ವಿವರಗಳು ಕೆಳಕಂಡಂತಿದೆ

1)	ಆರ್ಥಿಕ ದುರ್ಬಲ ವರ್ಗ	42 ಅರ್ಜಿಗಳು
2)	ಕಡಿಮೆ ಆದಾಯ ವರ್ಗ	44 ಅರ್ಜಿಗಳು
3)	ಮಧ್ಯಮ ಆದಾಯ ವರ್ಗ	09 ಅರ್ಜಿಗಳು
4)	ಹೆಚ್ಚಿನ ಆದಾಯ ವರ್ಗ	02 ಅರ್ಜಿಗಳು
	ಒಟ್ಟು	97 ಅರ್ಜಿಗಳು

ಆ) ಮುಳಬಾಗಿಲು ತಾಲ್ಲೂಕು, ಮುಳಬಾಗಿಲು ಗ್ರಾಮದಲ್ಲಿ ಗೃಹ ಮಂಡಳಿಯಿಂದ ಭೂಸ್ವಾಧೀನಕ್ಕೆ ಸ.ನಂ. 609ರಿಂದ 623ರಲ್ಲಿರುವ 89 ಎಕರೆ 10 ಗುಂಟೆ ಜಮೀನನ್ನು ಭೂಸ್ವಾಧೀನಕ್ಕಾಗಿ ಗುರುತಿಸಲಾಗಿದೆ.

ಇ) ಬೇಡಿಕೆ ಸಮೀಕ್ಷೆ ನಡೆಸಲಾಗಿ, ಮನೆಗಳಿಗೆ ಹೆಚ್ಚಿನ ಬೇಡಿಕೆ ಬಂದಿರುವುದಿಲ್ಲ. ಆದ್ದರಿಂದ ಭೂಸ್ವಾಧೀನದ ವಿಸ್ತೀರ್ಣ ಸೀಮಿತಗೊಳಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.